ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 18 ಡಿವಿಪಿ(2) 2016

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:11-04-2017.

## ಸುತ್ತೋಲೆ

ವಿಷಯ: 2017-18ನೇ ಸಾಲಿಗೆ ರಾಜ್ಯದಲ್ಲಿ ಹಾಲಿ ಇರುವ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ನವದೆಹಲಿಯ ಎಐಸಿಟಿಇ ಯ ಹಾಗೂ ರಾಜ್ಯ ಸರ್ಕಾರದ ಮಾನ್ಯತೆ ಪಡೆಯುವ ಬಗ್ಗೆ.

ಉಲ್ಲೇಖ :
1. ನವದೆಹಲಿಯ ಎಐಸಿಟಿಇ ಯ ವೆಬ್ ಪೋರ್ಟಲ್ ಹಾಗೂ ಪ್ರಮುಖ ದಿನ ಪತ್ರಿಕೆಗಳಲ್ಲಿ ನೀಡಲಾಗಿರುವ ಸಾರ್ವಜನಿಕ ಪ್ರಕಟಣೆ ಸಂಖ್ಯೆ: ಎಡಿವಿಟಿ ನಂ. ಅಪ್ರೂವಲ್ ದಿನಾಂಕ: 05-01-2017.
2. 2017-18ನೇ ಸಾಲಿಗೆ ಪಾಲಿಟೆಕ್ನಿಕ್‌ಗಳಿಗೆ ಎಐಸಿಟಿಇ ಯು ನೀಡಲಿರುವ ಅನುಮೋದನೆ.

-0-

ಉಲ್ಲೇಖ(1) ರಲ್ಲಿ ನಮೂದಿಸಿರುವ ನವದೆಹಲಿಯ ಎಐಸಿಟಿಇಯ ಮಾರ್ಗಸೂಚಿಗಳನ್ವಯ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಂದ 2017-18ನೇ ಸಾಲಿಗೆ ನವದೆಹಲಿಯ ಎಐಸಿಟಿಇಯ ಮಾನ್ಯತೆ ವಿಸ್ತರಣೆಯನ್ನು ಪಡೆಯಲು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿರುವುದು ಸರಿಯಷ್ಟೆ. ಈ ಪಾಲಿಟೆಕ್ನಿಕ್‌ಗಳಿಗೆ ಎಐಸಿಟಿಇಯು ಪಾಲಿಟೆಕ್ನಿಕ್‌ಗಳ ವೆಬ್‌ಪೋರ್ಟಲ್‌ನಲ್ಲಿ ಅನುಮೋದನೆಯನ್ನು ವಿಸ್ತರಿಸಿ ಆದೇಶ (AICTE's extension of Approval letter EOA for 2017-18) ನೀಡುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಆದೇಶವನ್ನು ಡೌನ್‌ಲೋಡ್ ಮಾಡಿ ದೃಢೀಕರಿಸಿ ಮೂರು ಪ್ರತಿಗಳನ್ನು ಕೂಡಲೇ ನಿರ್ದೇಶನಾಲಯಕ್ಕೆ ಕಳುಹಿಸಬೇಕಾಗಿ ಸೂಚಿಸಲಾಗಿದೆ.

ನವದೆಹಲಿಯ ಎಐಸಿಟಿಇಯ ಮಾನ್ಯತೆ ಪಡೆದ ಪಾಲಿಟೆಕ್ನಿಕ್‌ಗಳಿಗೆ ರಾಜ್ಯ ಸರ್ಕಾರದ ಮಾನ್ಯತೆಯನ್ನು ಪಡೆಯಲು ಹಾಗೂ ಕೋರ್ಸ್‌ವಾರು ಪ್ರವೇಶಾತಿಯನ್ನು ನಿಗಧಿಪಡಿಸಿ ಆದೇಶ ಹೊರಡಿಸುವಂತೆ ಕೋರಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಬೇಕಾಗಿರುತ್ತದೆ. ಆದ್ದರಿಂದ ನಿಮ್ಮ ಪಾಲಿಟೆಕ್ನಿಕ್‌ಗೆ 2017-18ನೇ ಸಾಲಿಗೆ ಎಐಸಿಟಿಇ ಯ ಅನುಮೋದನೆ ಪಡೆದಿರುವ ಮೂರು ದೃಢೀಕೃತ ಪ್ರತಿಗಳನ್ನು [duly attested by the Principal] ಕೂಡಲೇ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು. ಈ ದಿಸೆಯಲ್ಲಿ ಯಾವುದೇ ರೀತಿಯ ವಿಳಂಬ ಸಲ್ಲದು.

11/04/17

ಜಂಟಿ ನಿರ್ದೇಶಕರು (ಎಟಿಎಸ್)

ಜಂಟಿ ನಿರ್ದೇಶಕರು (ಎ.ಟಿ.ಎಸ್.)
ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
11/04

ಇವರಿಗೆ,

1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.
2. ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ - ನಿರ್ದೇಶನಾಲಯದ ಇ-ಗೌರ್‌ನೆನ್ಸ್ ವಿಭಾಗಕ್ಕೆ.
3. ಕಛೇರಿ ಪ್ರತಿ.